ತೂತು ಒಲೆ ಕೆಡಿಸಿತು' ಎನ್ನುವ ಗಾದೆ ಇದರಿಂದ ಹುಟ್ಟಿರಬಹುದು. ಹಾಗಾಗಿಯೇ ಮಾತನ್ನು ಜಗಳಕ್ಕೆ ಮೂಲ ಎನ್ನುವುದು. 'ಆಚಾರವಿಲ್ಲದ ನಾಲಗೆ, ನಿನ್ನ ನೀಚ ಬುದ್ಧಿಯ ಬಿಡು ನಾಲಗೆ' ಎನ್ನುವುದಾಗಲೀ, 'ಎಲುಬಿಲ್ಲದ ನಾಲಗೆ'ಯನ್ನು ಮನಸ್ಸಿಗೆ ಬಂದ ಹಾಗೆಲ್ಲಾ ತಿರುಗಿಸಬಾರದು; 'ನಾಲಗೆ ಬಿಗಿ ಹಿಡಿದು ಮಾತನಾಡಬೇಕು' ಎಂದು ಹೇಳುವ ಎಚ್ಚರದ ಮಾತುಗಳಾಗಲೀ ಮಾತಿನ ಮಹತ್ವವನ್ನು ಮನಗಾಣಿಸುತ್ತವೆ. ಆಡುವ ಮಾತನ್ನು ಅಳೆದೂ ಸುರಿದೂ ಆಡಿದರೆ ಜಗಳ ಏಕೆ ಆದೀತು?

ಕರ್ನಾಟಕದ ದಾವಣಗೆರೆ ಜಿಲ್ಲೆಯಲ್ಲಿ 'ಜಗಳೂರು' ಎಂಬ ಪಟ್ಟಣವಿದೆ. ಜಗಳಕ್ಕೂ ಜಗಳೂರಿಗೂ ಏನಾದರೂ ಸಂಬಂಧವಿದೆಯೇ ಎಂಬುದನ್ನು ಸ್ಥಳ ಐತಿಹ್ಯವೇ ತಿಳಿಸಬೇಕು. ಏಕೆಂದರೆ, ಸಾವಿಲ್ಲದ ಮನೆಯಂತೆ, ಕೋವಿಡ್ ಹೊಕ್ಕದ ಜಾಗ ಇರದಂತೆ, ಜಗಳವಾಡದ ನೆಲೆಗಳನ್ನು ನೀವು ಕಂಡಿರಾ? ನೀವು ಕಂಡಿರಾ? ಎಂದು ದುರ್ಬೀನು ಹಾಕಿ ಹುಡುಕಿದರೂ ಅಂತಹ ಜಾಗ ದುರ್ಲಭವೇ ಸರಿ. ಹಲವು ಬಾರಿ ನಾವು ಮಹಾ ಸಂಭಾವಿತರು ಎನ್ನುವ ಭಂಗಿಯಲ್ಲಿ (ಪೋಸ್‌ನಲ್ಲಿ) 'ಬೇರೆಯವರು ಕಾಲು ಕೆರೆದು ಜಗಳ ಮಾಡುವುದಕ್ಕೆ ಬಂದರೆ, ನಾನು ಕಡ್ಲೆಪುರಿ ತಿನ್ನುತ್ತಾ ಕೂರಬೇಕಾ?' ಎಂದು ಕೇಳುತ್ತೇವೆ. ಇದರ ಹಿಂದೆ, ಇತರೆಲ್ಲಾ ಜನರು ಜಗಳಗಂಟರು, ಜಗಳಕೋರರು ನಾವು ಮಾತ್ರ ಮಹಾನ್ ಶಾಂತಿಪ್ರಿಯರು, ಶಾಂತಿದೂತರು ಎನ್ನುವ ಸಣ್ಣ ದನಿ ಅಡಗಿರುತ್ತದೆ. ಆದರೆ, ಇದರ ನಡುವೆ, ಈ ಜಗತ್ತು ಎಂದಿಗೂ ಶಾಂತಿ, ಅಹಿಂಸೆಗಳ ಪ್ರತಿಪಾದಕರನ್ನು ಬಾಳಗೊಡಲಿಲ್ಲ ಎನ್ನುವ ಕಹಿಸತ್ಯವನ್ನೂ ಮರೆಯಬಾರದು. ಹಾಗೆ ಕೊಂದದ್ದು ವ್ಯಕ್ತಿಗಳನ್ನೇ ಹೊರತು ಅವರ ವ್ಯಕ್ತಿತ್ವಗಳನ್ನಲ್ಲ, ಅವರಿಂದ ಪ್ರವಹಿಸಿದ ಶಕ್ತಿಗಳನ್ನಲ್ಲ ಎನ್ನುವುದನ್ನು ಖಂಡಿತ ಮರೆಯಲೇಬಾರದು.

ಎಲ್ಲಿಯವರೆಗೆ ನಮ್ಮ ಜನರು 'ಎರಡು ಜಡೆ ಸೇರೋಲ್ಲ' ಎನ್ನುವ ಮನೋಭಾವ ಇಟ್ಟುಕೊಂಡು ಧಾರಾವಾಹಿಗಳನ್ನು ಚಿತ್ರೀಕರಿಸುತ್ತಾರೆಯೋ ಅಲ್ಲಿಯವರೆಗೆ 'ಜಗಳಂ ಸರ್ವಾಂತರ್ಯಾಮಿ' ಎನ್ನಬಹುದು. ಇಲ್ಲಿಯೂ ಲಿಂಗತಾರತಮ್ಯ ಕಾಣಬಹುದು. ಹೆಣ್ಣುಮಕ್ಕಳು ಮಾತ್ರ ಜಗಳಕ್ಕಾಗಿ ಯಾವಾಗಲೂ ಹಪಹಪಿಸುತ್ತಾರೆನ್ನುವ ಧೋರಣೆಯನ್ನು ನಿಚ್ಚಳವಾಗಿ ಗುರುತಿಸಬಹುದು. ಅತ್ತೆ–ಸೊಸೆ, ಅತ್ತಿಗೆ–ನಾದಿನಿ, ಅಕ್ಕ–ತಂಗಿ, ತಾಯಿ–ಮಗಳು, ಹೀಗೆ ಸಂಬಂಧಗಳೊಳಗೆ ಮುಗಿದರೆ, ಪಕ್ಕದ ಮನೆಯವರ ಕುರಿತು, ಎಕ್ಸ್‌ಟರ್ನಲ್ ಅಫೇರ್ಸ್‌ಗಳ ಬಗ್ಗೆ ಕಥೆ ಹೆಣೆದು ಸದಾಕಾಲ ಜಗಳ ಮಾಡುವ ಪಾತ್ರಗಳನ್ನು ಸೃಷ್ಟಿಸಿ, ಆ ರೀತಿಯ ಕಥೆಗಳನ್ನು ಹೆಣೆಯುವ ಚತುರ ಚಿತ್ರಕಥೆ ರಚನಕಾರರು ನಮ್ಮ ನಡುವೆ ಇರುವುದು ಯಾವ ಜನ್ಮದ ಪುಣ್ಯವೋ! ಕೆಲವು ಚಾನೆಲ್‌ಗಳಂತೂ, ಮನೆಮಂದಿಯನ್ನೆಲ್ಲಾ ಮುಂದೆ ಕೂರಿಸಿಕೊಂಡು 'ಬದುಕು ಜಟಕಾ ಬಂಡಿ' ಎಂದು ಹೇಳಿ, 'ಎತ್ತು ಏರಿಗೆ ಎಮ್ಮೆ ನೀರಿಗೆ' ಎನ್ನುವಂತಹ ಪ್ರವೃತ್ತಿಯವರನ್ನು ಚಾಣಾಕ್ಷತನದಲ್ಲಿ ಆರಿಸಿ, ಜಗಳವಾಡಿಸುತ್ತಾರೆ. ಕೌಟುಂಬಿಕ ಕಲಹಗಳು ಆಸ್ತಿ, ಗುಪ್ತ ಸಂಬಂಧ, ಮಾತ್ಸರ್ಯ ಇಂತಹ ಬಹಳ ರೋಚಕ ವಿಚಾರಗಳ ಕಾರಣಕ್ಕೆ ಆಗುವುದರಿಂದ ಹಾಗೂ ಬಹಳ ಸುಲಭಕ್ಕೆ ನಮ್ಮಂತಹ ಸಾಮಾನ್ಯ ಬಡಪಾಯಿಗಳಿಗೆ ಅರ್ಥವಾಗುವುದರಿಂದ ಇವುಗಳನ್ನು ವಿಜೃಂಭಿಸಲಾಗುತ್ತದೆ. ಆದರೆ, ಇಂಥಾ ಹಲವು ಸಾವಿರ ಜಗಳಗಳು ನಮ್ಮ ಕೋರ್ಟು ಕಚೇರಿಗಳಿಗೆ ತಲೆನೋವಾಗಿ ಉಳಿದಿರುವುದು ಸುಳ್ಳಲ್ಲ.

ಸಾಮಾನ್ಯವಾಗಿ ಜಗಳಗಳು ಯಾವುದೋ ಪ್ರಸಂಗದಲ್ಲಿ ಹುಟ್ಟಿಕೊಳ್ಳುತ್ತವೆ. ಇವು ಸಹಜ ಜಗಳಗಳು. ಆದರೆ, ಕೆಲವು ಜಗಳಗಳನ್ನು ಬೇಕೆಂದೇ ಹುಟ್ಟಿಸಲಾಗುತ್ತದೆ. ಇವು ಸಾಮರಸ್ಯದ ಸಮಾಜದಲ್ಲಿ ಹುಳಿ ಹಿಂಡುವ ಕುತ್ಸಿತ ಬುದ್ಧಿಯವರಿಂದ ಆಗುವಂಥದ್ದು. ಇದಕ್ಕೆ ಪ್ಯಾನಲ್ ಡಿಸ್ಕಷನ್‌ಗಳನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಕೆಲವು ಮಾಧ್ಯಮದವರು ಪ್ಯಾನಲ್ ಡಿಸ್ಕಷನ್‌ಗೆ ಕರೆದು ಜನಸಾಮಾನ್ಯರನ್ನು ನೆಮ್ಮದಿಯಾಗಿರಲು ಬಿಡದೆ, ಇಡೀ ದೇಶಕ್ಕೆ ಟಿ.ವಿ. ಪರದೆಯಲ್ಲಿ ಕಾಣಿಸಿಕೊಳ್ಳುತ್ತಿರುವವರ ಅಭಿಪ್ರಾಯಗಳನ್ನು ತಿಳಿದುಕೊಳ್ಳುವ ತುರ್ತಿನ ಹೊರತಾಗಿ ಮಾಡಲು ಬೇರೆ ಉದ್ಯೋಗ ಇಲ್ಲವೆಂಬಂತೆ ಪ್ರತಿಪಾದಿಸಿ, ಈ ಹೊತ್ತಿನ ತುರ್ತು ಇದು ಎನ್ನುವಂತೆ ಗಂಟಲು ಹರಿಸಿ ವಾಗ್ಯುದ್ಧಗಳನ್ನು ನಡೆಸುತ್ತಾರೆ. ಈ ಜಗಳಗಳಲ್ಲಿ ಕೋಮುದ್ವೇಷದ, ಮತೀಯ ಸಂಘರ್ಷದ ವಿಚಾರಗಳನ್ನು ಪ್ರಸ್ತಾಪಿಸಲಾಗುತ್ತದೆ. ಯಾವ ಒಮ್ಮತಕ್ಕೂ ಬರಲಾರದ ಇಂಥಾ ವಿಷಯಗಳನ್ನು ತೆಗೆದುಕೊಂಡು ನೇರ ಪ್ರಸಾರದಲ್ಲಿ ಕೈ ಕೈ ಮಿಲಾಯಿಸಿ ಗುದ್ದಾಡಿಕೊಳ್ಳುವಂತೆ ಮಾಡಿ ತಮ್ಮ ಟಿ.ಆರ್.ಪಿ. ರೇಟ್ ಹೆಚ್ಚಿಸಿಕೊಳ್ಳುತ್ತಾರೆ. ಹೀಗೆ, ತಮ್ಮ ಬೇಳೆ ಬೇಯಿಸಲು ಇತರರಿಗೆ ತಂದಿಟ್ಟು ನೋಡುವವರನ್ನು ಕಂಡರೆ, 'ಎಂಥಾ ಲೋಕವಯ್ಯಾ ಇದು ಎಂಥಾ ಲೋಕವಯ್ಯಾ' ಎಂದು ವ್ಯಥೆ ಪಡುವಂತಾಗುತ್ತದೆ. ನಮ್ಮ ಹಿರಿಯ ವಚನಕಾರರಂತಹ ಲೋಕಜ್ಞಾನಿಗಳು ಬಹಳ ಹಿಂದೆಯೇ 'ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ಕೂಡಲ ಸಂಗಮದೇವಾ' ಎಂದು ತಿಳಿ ಹೇಳಿದ್ದರೂ ಕೇಳುವ ಜಾಯಮಾನದವರು ನಾವಲ್ಲವಲ್ಲ. ನಮ್ಮ ಬಹುತೇಕ ಜಗಳ, ಮುನಿಸು, ಕಾದಾಟ, ಕಲಹಗಳು ಪ್ರಾರಂಭವಾಗುವುದೇ ನೆರಮನೆಯಿಂದ ಎನ್ನುವ ನಂಬುಗೆ ನಮ್ಮದು.

ನಿಜಕ್ಕೂ ಜಗಳ ಏಕಾಗಿ ನಡೆಯುತ್ತದೆ? ಜಗಳ ಮಾಡುವ ಅಗತ್ಯ ಇದೆಯಾ? ಜಗಳದಿಂದ ಪರಿಹಾರ ಸಿಗಲು ಸಾಧ್ಯವೇ? ಎಂಬ ಪ್ರಶೆಗಳನ್ನು ಕೇಳಿಕೊಂಡರೆ, ಉತ್ತರ ಸಿಗದ ಪ್ರಶ್ನೆಗಳ ಪಟ್ಟಿಗೆ ಇವನ್ನೂ ಸೇರಿಸಬೇಕಾಗುತ್ತದೆ. ನಮ್ಮ ದೇಹದೊಳಗಿರುವ ಧಾತುಗಳ ಸಮೇತ, ಬುದ್ಧಿ–ಭಾವಗಳು ಸಹ ನಿತ್ಯ ಸಂಘರ್ಷದಲ್ಲಿರುತ್ತವೆಯಂತೆ.

'ಮಾತು ಮಾತು ಮಥಿಸಿ ಬಂದ ನಾದದ ನವನೀತ' ಆಗಬೇಕಾದ ಮಾತು, 'ಮಾತೇ ಮೃತ್ಯು' ಎಂಬಂತಾದರೆ, ಆ ಅರ್ಥವಿಲ್ಲದ ಮಾತು ಜಗಳಕ್ಕೂ, ಜಗಳದಿಂದ ರಕ್ತಪಾತದಂತಹ ಅನಾಹುತಕ್ಕೂ ನಾಂದಿಯಾಗಬಹುದು. ಅದೇ ಮಾತು ಆರೋಗ್ಯಕರ ವಿಚಾರ ಮಂಥನಕ್ಕೆ, ಚಿಂತನೀಯ ಚರ್ಚೆಗೆ ಮುಂದಾದರೆ ಸ್ವಾಗತಾರ್ಹ. 'ಮಾತು ಬೆಳ್ಳಿ ಮೌನ ಬಂಗಾರ' ಎಂಬ ಮಾತಿನಲ್ಲಿರುವ ಅರ್ಥವನ್ನು ಕಡೆಗಣಿಸಿ, 'ಬೆಳ್ಳಿ ಬಂಗಾರ'ದ ವಿಚಾರಕ್ಕೇ ಗಂಡ ಹೆಂಡಿರ ನಡುವೆ ಜಗಳ ಪ್ರಾರಂಭವಾದರೆ ಅವರು ಉಂಡು ಮಲಗಿದಾಗ ಜಗಳ ಮುಗಿಯಿತೆಂದು ಹೇಗೆ ಮತ್ತು ಯಾರು ತೀರ್ಮಾನಿಸುವುದು?

ಪ್ರತಿಕ್ರಿಯಿಸಿ: feedback@sudha.co.in

